# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5019/2022

ಫ್ರಾಸಾ-4

ಚಾಸಾ-8

ದಿನಾಂಕಃ28/05/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಶಶಿಧರ |
| **ತಂದೆಯ ಹೆಸರು** | ಲೇಟ್ ಗೊಡ್ಡಾಚಾರ್ಯ |
| **ವಯಸ್ಸು** | 55 ವರ್ಷ |
| **ಉದ್ಯೋಗ** | ಅರ್ಚಕರು |
| **ವಾಸಸ್ಥಳ** | ಪುಲಮಘಟ್ಟ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ನನ್ನ ತಂದೆ ತಾಯಿ ಹೆಸರು ದೊಡ್ಡಚಾರ್ಯ ಮತ್ತು ಪಾರ್ವತಮ್ಮ. ನಾವು ಒಟ್ಟು 8 ಜನ ಮಕ್ಕಳು. ಮೃತೆ ಸುಮಿತ್ರಮ್ಮ ನನ್ನ ತಂಗಿ. ಲಾವಣ್ಯ ಅಲಿಯಾಸ್ ಚಾಯಾ ನನ್ನ ತಂಗಿ. ಸುಮಿತ್ರಮ್ಮಳಿಗೆ ಇಬ್ಬರು ಮಕ್ಕಳು. ಅವರು ಹೆಸರು ದೊಡ್ಡವಳು ಸುವರ್ಣ, ಸಣ್ಣವಳು ಶೈಲಜಾ. ಲಾವಣ್ಯ @ ಚಾಯಾಳಿಗೆ ಒಬ್ಬನೇ ಮಗ, ಅವನ ಹೆಸರು ಪುನೀತ್. ಶೈಲಜಾ ಮತ್ತು ಪುನೀತನನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ವಿ.ಸಿ. ಮೂಲಕ 1 ಮತ್ತು 2 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಸುಮಿತ್ರ ಕೊರಟಗೆರೆಯಲ್ಲಿ ವಾಸವಾಗಿದ್ದಳು. ಘಟನೆ ಕಾಲಕ್ಕೆ ಅವರ ಮನೆಯಲ್ಲಿ ಸುಮಿತ್ರ ಮತ್ತು ಶೈಲಜಾ ವಾಸ ಇದ್ದರು. ಸುವರ್ಣ ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಾಗಿದ್ದಳು. ಚಾಯಾ ಕೊರಟಗೆರೆಯಿಂದ 30 ಕಿ.ಮೀ ದೂರ ಇರುವ ಮಣ್ಣೆ ಎಂಬ ಊರಿನಲ್ಲಿ ವಾಸ ಇದ್ದಳು.

ಸುಮಾರು 2 ವರ್ಷಗಳ ಹಿಂದೆ ನಾನು ನನ್ನ ಊರಿನಲ್ಲಿದ್ದಾಗ ಪುನೀತ್ ನನಗೆ ಫೋನ್ ಮಾಡಿ ಬೆಳಿಗ್ಗಿನ ಜಾವ 5-30 ಗಂಟೆಗೆ ಫೋನ್ ಮಾಡಿ ದೊಡ್ಡಮ್ಮ ತೀರಿ ಹೋಗಿದ್ದಾರೆ ಬನ್ನಿ ಎಂದು ಹೇಳಿದ. ನಾನು ಬೆಳಿಗ್ಗೆ 7-00 ಗಂಟೆ ಹೊತ್ತಿಗೆ ನನ್ನ ಮಗ ಮುರುಳಿಧರನ ಜೊತೆ ಕೊರಟಗೆರೆ ಬಂದೆ. ಹೆಣವನ್ನು ತೊಟ್ಟಿಯಿಂದ ಹೊರಗಡೆ ತೆಗೆದು ಇಟ್ಟಿದ್ದರು. ತಂಗಿ ಮುಖ ನೋಡಿದೆ, ನಾಲಿಗೆ ಕಚ್ಚಿಕೊಂಡಿತ್ತು. ನಾಲಿಗೆಯಲ್ಲಿ ಗಾಯ ಆಗಿತ್ತು. ಆಕೆ ಸತ್ತು ಹೋಗಿದ್ದಳು. ಸಂಪಿನೊಳಗಡೆ ಬಿದ್ದು ಸತ್ತು ಹೋಗಿದ್ದಳು ಎಂದು ಅಲ್ಲಿ ಹೇಳುತ್ತಿದ್ದರು. ಕೊರಟಗೆರೆಯ ಮಲ್ಲೇಶ್ವರ ರೋಡಿನಲ್ಲಿ ಇರುವ ಸ್ಮಶಾನದಲ್ಲಿ ದಫನ ಮಾಡಿದೆವು. 15 ದಿವಸಗಳ ನಂತರ ತಿಥಿ ಮಾಡಿದೆವು. ಆ ದಿನ ಪುನೀತ್ ಮತ್ತು ಶೈಲಜಾ ನನ್ನ ತಂಗಿ ಸುಮಿತ್ರಾಳನ್ನು ಕೊಲೆ ಮಾಡಿದರು ಎನ್ನುವ ವಿಚಾರ ಗೊತ್ತಾಯಿತು. ಇದನ್ನು ಶೈಲಜಾ ಸುವರ್ಣಳಿಗೆ ಹೇಳಿದಳು. ಬಳಿಕ 1 ತಿಂಗಳ ನಂತರ ನಾನು ಮತ್ತೆ ಕೊರಟಗೆರೆ ಸಮಿತ್ರಳಮ್ಮನ ಮನೆಗೆ ಹೋಗಿದ್ದೆ. ಅಲ್ಲಿಂದ ಮಲ್ಲೇಶ್ವರ ರೋಡಿನ ಬಳಿ ಸುಮಿತ್ರಳನ್ನು ದಫನ ಮಾಡಿದ ಜಾಗಕ್ಕೆ ಹೋಗಿದ್ದೆ. ಅಲ್ಲಿ ನಾನು, ನನ್ನ ಅಣ್ಣ ಮತ್ತು ಇತರರು ಬಂದಿದ್ದರು. ದಫನ ಮಾಡಿದ ಸುಮಿತ್ರಾಳ ಮೃತ ದೇಹವನ್ನು ಮತ್ತೆ ಹೊರತೆಗೆದು ಮಹಜರ್ ಮಾಡಿದರು. ಪೋಲೀಸರು ಇದ್ದರು. ಜಿಲ್ಲಾಧಿಕಾರಿಗಳು ಬಂದಿದ್ದರು. ಅವರು ನನ್ನ ಹೇಳಿಕೆ ದಾಖಲಿಸಿಕೊಂಡರು. ನನ್ನ ಪ್ರಕಾರ ನನ್ನ ತಂಗಿಯ ಸಾವಿಗೆ ಶೈಲಜ ಮತ್ತು ಪುನೀತ್ ಕಾರಣ. ಅವರಿಬ್ಬರು ಅಣ್ಣ ತಂಗಿಯಾದರೂ ಪರಸ್ಪರ ಮದುವೆಯಾಗಲು ತಿರ್ಮಾನಿಸಿದ್ದರು. ಅದಕ್ಕೆ ಸುಮಿತ್ರ ಅವರಿಬ್ಬರು ಅಣ್ಣ ತಂಗಿಯಾದ ಕಾರಣ ವಿರೋಧಿಸಿದ್ದಳು. ಅದಕ್ಕೆ ಆಕೆಯನ್ನು ಕೊಲೆ ಮಾಡಿದರು.

**<u>ಪಾಟೀಸವಾಲು ಶ್ರೀ. MM ವಕೀಲರಿಂದ ಆರೋಪಿಗಳ ಪರವಾಗಿಃ-</u>**

ಪುನೀತ್ ಫೋನ್ ಮಾಡಿದ ದಿನಾಂಕ ನೆನಪಿಲ್ಲ. ಸುಮಿತ್ರಮ್ಮ ಸಂಪಿಗೆ ಬಿದ್ದಾಗ ನಾಲಿಗೆ ಕಚ್ಚಿಕೊಂಡು ಸತ್ತಳು ಎಂದರೆ, ಸಂಪಿನಲ್ಲಿ ಬಿದ್ದಾಗ ನಾನು ನೋಡಿಲ್ಲ. ತಿಥಿ ಮಾಡಿದ ದಿನಾಂಕ ನನಗೆ ನೆನಪಿಲ್ಲ. ಪುನೀತ್ ಮತ್ತು ಶೈಲಜಾ, ಸುಮಿತ್ರಮ್ಮಳನ್ನು ಕೊಲೆ ಮಾಡಿದ್ದು ಎಂಬ ವಿಚಾರ ನನಗೆ ಸುವರ್ಣ ಹೇಳಿದಳು. ಅವರು ಕೊಲೆ ಮಾಡಿದ ವಿಚಾರ ವೈಯಕ್ತಿಕವಾಗಿ ನನಗೆ ಗೊತ್ತಿಲ್ಲ. ಸುವರ್ಣಮ್ಮ ವಾಸ ಇದ್ದ ಮನೆ ಆಕೆಯ ಸ್ವಂತ ಮನೆ. ಸದರಿ ಮನೆ ಕೊರಟಗರೆ ಬಸ್ ನಿಲ್ದಾಣದಿಂದ 50 ಮೀಟರ್ ಅಂತರ ದೂರ ಇದೆ ಎಂದರೆ ಸರಿ. ಅದು ಆರ್.ಸಿ.ಸಿ. ಮನೆ ಎಂದರೆ ಸರಿ. ಆ ಮನೆ 80 ಲಕ್ಷ ಬೆಲೆಬಾಳುತ್ತೆ ಎಂದರೆ

ನನಗೆ ಗೊತ್ತಿಲ್ಲ. ಸುಮಿತ್ರಮ್ಮಳ ಗಂಡನಿಗೆ ಸೇರಿದ ಒಂದು ನಿವೇಶನ ಕೊರಟಗೆರೆ ತಾಲ್ಲೂಕು ಕಛೇರಿಯ ಹಿಂಭಾಗದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಶೈಲಜಾ ಮತ್ತು ಪುನೀತ್ , ಸುಮಿತ್ರಮ್ಮಳ ಕೊಲೆ ಮಾಡಿಲ್ಲ ಎಂದರೆ ಸರಿಯಲ್ಲ. ಸುವರ್ಣ ಸದರಿ ಆಸ್ತಿಗಳನ್ನು ಕಬಳಿಸಲು ಅವರ ಮೇಲೆ ಸುಳ್ಳು ದೂರು ನೀಡಿದ್ದಾಳೆಂದರೆ ಸರಿಯಲ್ಲ. ಸುವರ್ಣಮ್ಮ ಹೇಳಿ ನನಗೆ ಈ ಕೊಲೆ ವಿಚಾರ ಗೊತ್ತಾಗಿದ್ದು ಎಂದರೆ ಸರಿ. ಶೈಲಜಾ ಮತ್ತು ಪುನೀತ್ ಪರಸ್ಪರ ಮದುವೆಯಾಗಲು ಇಚ್ಛಿಸಿದ್ದರು ಎಂಬ ವಿಚಾರ ನನಗೆ ಸುವರ್ಣ ಹೇಳಿದ್ದರಿಂದ ಗೊತ್ತಾಗಿದ್ದು ಎಂದರೆ ಸರಿ. ಶೈಲಜಾ ಬಿ.ಕಾಂ ಓದಿದ್ದಾರೆಂದರೆ ಗೊತ್ತಿಲ್ಲ. ಆಕೆ ವಿದ್ಯಾವಂತಳು ಎಂದರೆ ಸರಿ. ಸುಮಿತ್ರಮ್ಮಳ ಕುಟುಂಬ ಸುಸಸ್ಕೃತ ಕುಟುಂಬ ಎಂದರೆ ಸರಿ. ಪುನೀತ್ ವಿದ್ಯಾವಂತ ಎಂದರೆ ಸರಿ. ಅವರಿಬ್ಬರು ಪರಸ್ಪರ ಅಣ್ಣ ತಂಗಿ ಎನ್ನುವ ವಿಚಾರ ಅವರಿಗೆ ಗೊತ್ತು ಎಂದರೆ ಸರಿ. ಅವರ ಪರಸ್ಪರ ಅಣ್ಣ ತಂಗಿ ಆದ ಕಾರಣ ಪರಸ್ಪರ ಮದುವೆಯಾಗಬಾರದು ಎನ್ನುವುದು ಅವರಿಗೆ ಗೊತ್ತು ಎಂದರೆ ಸಾಕ್ಷಿ ಅವರ ಮನಸ್ಸಿನೊಳಗಿದ್ದ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ಪರಸ್ಪರ ಮದುವೆಯಾಗಲು ಬಯಸಿದ್ದರು ಎಂದು ಸುವರ್ಣ ಕಥೆ ಕಟ್ಟಿದ್ದಳು ಎಂದರೆ ಸರಿಯಲ್ಲ. ಅವರಿಬ್ಬರು ಪರಸ್ಪರ ಮದುವೆಯಾಗಲು ಇಚ್ಛಿಸಿದ್ದರು ಎಂದು ಸುವರ್ಣಮ್ಮಳಿಗೆ ಅವರು ಹೇಳಿಲ್ಲ ಎಂದರೆ ಸರಿಯಲ್ಲ. ಆಗ ನಾನು ಅಲ್ಲಿ ಇರಲಿಲ್ಲ. ಅವರು ಆ ರೀತಿ ಹೇಳಿಲ್ಲ, ಸುವರ್ಣಮ್ಮ ವಿರೋದ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸುಮಿತ್ರಮ್ಮಳನ್ನು ಪುನೀತ್ ಮತ್ತು ಶೈಲಜಾ ಕೊಲೆ ಮಾಡಿದ್ದು ಎಂದು ಖಚಿತವಾಗಿ ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**